## ಸಿನಿಮಾವೇ ವಾಸಿ

ಸಾಮಾಜಿಕ ಮಾಧ್ಯಮಗಳಿಗೆ ವಿಧಿಸಿರುವ ನಿರ್ಬಂಧವನ್ನು ಖಾಸಗಿ ಸುದ್ದಿ ವಾಹಿನಿಗಳಿಗೂ ವಿಸ್ತರಿಸಬೇಕು ಎನ್ನುವುದು ನನ್ನ ಮನವಿ. ಯಾವುದೇ ಸುದ್ದಿ ವಾಹಿನಿಯನ್ನು ನೋಡಿದರೂ ದಿನವಿಡೀ ಕೊರೊನಾ ಆತಂಕವನ್ನೇ ಬಿತ್ತರಿಸುತ್ತಿವೆ. ಅಪ್ಪಿತಪ್ಪಿಯೂ ಸಮಸ್ಯೆಯ ಪರಿಹಾರವಾಗಲಿ ಎದುರಾಗಿರುವ ಸಮಸ್ಯೆಯನ್ನು ಎದುರಿಸುವ ಸಮರ್ಪಕ ಮಾಹಿತಿಯನ್ನು ಯಾವ ಟೀವಿ ಕೂಡ ನೀಡುವುದಿಲ್ಲ. ಬರೀ ಆತಂಕವನ್ನೇ ಹಬ್ಬಿಸಿ ಮನೆ ಒಳಗೆ ಮೊಟ್ಟೆ ಇಟ್ಟ ಕೋಳಿಯಂತೆ ಕುಳಿತುಕೊಳ್ಳಿ ಎಂದು ಹುಯಿಲು ಎಬ್ಬಿಸುತ್ತಿವೆ. ಹೊರ ಹೋಗಿ ಬೇಕಾದ ದಿನಸಿ ತರಕಾರಿ ತರಲೂ ಕೂಡ ತಕರಾರನ್ನು ಪೊಲೀಸರು ಎತ್ತುತ್ತಿದ್ದಾರೆ. ನಾವು ಒಂದು ನಿಂಬೆ ಹಣ್ಣು ತರಬೇಕು ಎಂದರೂ ಒಂದು ಕಿಲೋ ಮೀಟರ್ ಹೋಗಲೇಬೇಕು. ಅದಕ್ಕೆ ನಡೆದುಕೊಂಡು ಹೋಗಲು ಸಾಧ್ಯವೇ? ಎನ್ನುವ ವಾಸ್ತವವನ್ನು ಅರಿಯದೇ ಪೊಲೀಸರ ಕಾರ್ಯಾಚರಣೆಯನ್ನೇ ಟೀವಿಗಳು ಪ್ರಶಂಸಿಸುತ್ತಿವೆ. ದೈಹಿಕವಾಗಿ ಹಲ್ಲೆಯನ್ನೂ ಕೂಡ ಪ್ರಶಂಸಿಸುತ್ತಿವೆ. ಇದು ತಪ್ಪಬೇಕು ಆರಕ್ಷಕರ ತಪ್ಪನ್ನೂ ಖಂಡಿಸಲೇಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಮನೆಯಲ್ಲಿ ಕುಳಿತು ಕಾಲಹರಣ ಮಾಡಲು ಹೆಣಗಾಡುವ ನಮಗೆ ಅರ್ಥಪೂರ್ಣವಾಗಿ ಸಮಯವನ್ನು ವ್ಯಯ ಮಾಡುವಂತಹ ಕಾರ್ಯಕ್ರಮವನ್ನು ಟೀವಿ ನೀಡುತ್ತಿಲ್ಲ. ಬೆಳಗಿನಿಂದ ರಾತ್ರಿಯ ಪ್ರಧಾನ ಸುದ್ದಿ ಪ್ರಸರಣದ ತನಕ ಹೇಳಿದ್ದನ್ನೇ ಹೇಳುತ್ತಾರೆ. ಇದರ ಬದಲು ಬೇರೆ ಇನ್ನೇನಾದರೂ ಕಾರ್ಯಕ್ರಮ ರೂಪಿಸುವ ಸೃಜನಶೀಲತೆ ನಮ್ಮ ವಾಹಿನಿಗಳಿಗೆ ಇಲ್ಲವೆ? ಕೊನೆ ಪಕ್ಷ ವೈಜ್ಞಾನಿಕವಾಗಿಯಾದರೂ ಕಾರ್ಯಕ್ರಮವನ್ನು ನೀಡುತ್ತಿವೆಯೇ ಎಂದರೆ ಅದು ಇಲ್ಲ. ಇದೇ ಕಾರಣಕ್ಕೆ ವರ್ತಮಾನದ ಸುದ್ದಿಯ ಹಪಹಪಿ ನನ್ನಲ್ಲಿ ಇಲ್ಲದಾಗಿದೆ. ಹಳೆಯ ಸಿನಿಮಾಗಳನ್ನೇ ದಿನದಲ್ಲಿ ಒಂದೆರಡು ನೋಡಿ ನನ್ನ ಸಮಯವನ್ನು ಕಳೆಯುತ್ತಿದ್ದೇನೆ. ಕೆಲವೊಮ್ಮೆ ನೋಡಿದ ಸಿನಿಮಾವನ್ನೇ ನೋಡುವ ದೌರ್ಭಾಗ್ಯ ಕೂಡ ಬಂದು ಒದಗುತ್ತಿದೆ. ಈ ಸುದ್ದಿ ವಾಹಿನಿಗಳ ಭೀತಿಯ ಅರ್ಭಟದ ನಡುವೆ ಅದೇ ವಾಸಿ ಎಂದೆನಿಸುತ್ತದೆ.

—ಪದ್ಮಾ ಶ್ರೀರಾಮಚಂದ್ರ, ಯಲಹಂಕ

ವಾರದ ಪತ್ರ

## ಹಳೆ ಸಂಗಾತಿಯ ಸಾಂಗತ್ಯ

ಅನಪೇಕ್ಷಿತ ಕೊರೊನಾ ಸಾಂಕ್ರಾಮಿಕ ರೋಗ ಜಗತ್ತನ್ನು ಭಾದಿಸುತ್ತಿದೆ. ಅದರ ದಾಳಿಗೆ ಭಾರತ ಕೂಡ ನಲುಗಿದೆ. ಮನೆಯಿಂದ ಹೊರ ಹೋಗಿ ದುಡಿಯಬೇಕಾದವರು ಮನೆಯ ಬಾಗಿಲನ್ನು ದಾಟದಷ್ಟು ಆತಂಕ ಕಾಡುತ್ತಿದೆ. ಇಂತಹ ತಲ್ಲಣದ ವಾತಾವರಣದಲ್ಲಿ ಬಂಧು ಬಳಗ, ಸ್ನೇಹಿತರ ಜೊತೆ ಸೇರಿ ಕುಶಲೋಪರಿಯನ್ನೂ ವಿಚಾರಿಸದಷ್ಟು ಭಯ ಮನಸ್ಸಲ್ಲಿ ನೆಲೆಯೂರಿದೆ . ಇಂತಹ ಸಂಕೀರ್ಣ ಪರಿಸ್ಥಿತಿಯಲ್ಲಿ ನಮ್ಮ ಏಕೈಕ ಸಂಗಾತಿ ಎಂದರೆ ಟೀವಿ. ಮುಂಜಾನೆ ಎದ್ದು ಯಾರ್‍ಯಾರ ನೆನೆಯಲಿ ಎಂದರೆ ಟೀವಿಯ ಸುದ್ದಿ ವಾಹಿನಿ ಇಲ್ಲವೆ ಮನೋರಂಜನೀಯ ವಾಹಿನಿಗಳ ಎದ್ದೊಂದು ಗಳಿಗೆ ನೆನೆದೇವು ಎನ್ನುವಂತೆ ನಮ್ಮ ಬದುಕು ಆಗಿದೆ. ದಿನವಿಡೀ ಟೀವಿಯಲ್ಲಿಯೇ ಮನೆ ಮಂದಿ ಮುಳುಗುತ್ತಿದ್ದೇವೆ. ಸರಿಯಾಗಿ ಪತ್ರಿಕೆ ನಿಯತಕಾಲಿಕೆಗಳು ಮನೆಗೆ ಬರುತ್ತಿಲ್ಲ. ಓದಿದ ಹಳೆ ಪುಸ್ತಕಗಳನ್ನೇ ಮರು ಓದಲು ಇಷ್ಟವಾಗದೆ ಮರಳಿ ಟೀವಿಯ ಪರದೆಯ ಮೇಲೆ ಕಣ್ಣು ನೆಟ್ಟು... ಕೈಬೆರಳುಗಳು ರಿಮೋಟ್ ಮೇಲೆ ಆಡುತ್ತಿದ್ದಂತೆ ಝೀ ಕನ್ನಡದಲ್ಲಿ ನೀವು ಮಿಸ್ ಮಾಡ್ಕೊಂಡ ಶೋಗಳನ್ನ ಮತ್ತೆ ನೋಡುವ ಭಾಗ್ಯ ಎನ್ನುವ ಜಾಹೀರಾತು ಕ್ಷಣ ಕಾಲ ಹಿಡಿದಿಟ್ಟಿತು. ಮಾಡಲೇಬೇಕಾದ ಕೆಲಸ ಕಾರ್ಯಗಳು ಏನೂ ಇಲ್ಲ. ದಿನವೆಲ್ಲ ಮನೆಯಲ್ಲೇ ಇರುವ ಭಾಗ್ಯ ಇರುವಾಗ, ಇವತ್ತು ನೋಡಿಯೇ ಬಿಡೋಣ ಎನ್ನುವ ಮನಸ್ಸಿಗೆ ಏನೋ ಖುಷಿಯನ್ನು ಟೀವಿ ನೀಡುತ್ತಿದೆ ಎಂದೆನಿಸಿತು. ನಾವು ಇಷ್ಟ ಪಟ್ಟ 'ಜೊತೆಜೊತೆಯಲ್ಲಿ', 'ಕಮಲಿ', 'ನಾಗಿಣಿ', 'ಪಾರು' ಮತ್ತೆ ಹಿಂದಿರುಗಿ ಬರುತ್ತಿವೆ. ಮರೆತು ಹೋದ ಕತೆ ಇಲ್ಲವೇ ಮಿಸ್ ಮಾಡಿಕೊಂಡ ಕಂತುಗಳನ್ನು ಮತ್ತೆ ನೋಡುವಂತೆ ಆಗಿದೆ. ಜನಪ್ರಿಯ ಸರಿಗಮಪ ಹಿಂದಿನ ಕಂತುಗಳನ್ನು ನೋಡುವುದು ಖುಷಿಯನ್ನು ಕೊಡುತ್ತಿದೆ. ಮನೆಯಲ್ಲಿ ಇದ್ದು ಕಾಲಹರಣದ ಕ್ಷಣದ ಖುಷಿ ಟೀವಿಯಿಂದ ಎದ್ದ ಮೇಲೆ ಮತ್ತೆ ಆತಂಕದ ಕಾರ್ಮೋಡವೇ ಮನಸ್ಸನ್ನು ಆವರಿಸುತ್ತಿದೆ. ಯಾವತ್ತು ಈ ಆತಂಕ ದೂರ ಆಗುತ್ತದೆಯೋ? ನೆಮ್ಮದಿಯ ಕ್ಷಣ ಮತ್ತೆ ಬರುತ್ತದೆಯೋ... ಎಂದು ತಡಕಾಡುವ ನಮಗೆ ಹೊತ್ತು ಕಳೆಯಲು ಝೀ ಕನ್ನಡದ ಹಳೆಯ ಕಾರ್ಯಕ್ರಮಗಳೇ ಸಾಂಗತ್ಯ ನೀಡುತ್ತಿವೆ.

—ಜಯ್‌ಪ್ರಕಾಶ್ ಟಿ.ಎಸ್. ಬೆಂಗಳೂರು

## ಮೆಟ್ರೋ ಜೋಕ್

'ಮ'ಕಾರ ಪ್ರಿಯ ಸೀತಾರಾಂ ಧಾರಾವಾಹಿಗಳಲ್ಲಿ ಹಾಸ್ಯ ಸನ್ನಿವೇಶಗಳು ಅತ್ಯಂತ ಪೇಲವವಾಗಿರುತ್ತವೆ. 'ಮಗಳು ಜಾನಕಿ'ಯಲ್ಲಿ ಶ್ಯಾಮಲಕ್ಕ ಮತ್ತು ಸುಂದರಮೂರ್ತಿ ಅವರ ನಡುವಿನ ಸಂಭಾಷಣೆ ಒಳ್ಳೆಯ ಉದಾಹರಣೆಗಳು. ನಿರ್ದೇಶಕರು, ಪ್ರತಿ ಎಪಿಸೋಡಿನಲ್ಲೂ ಶ್ಯಾಮಲಕ್ಕನ ಗಂಡನ ಬೇಜವಾಬ್ದಾರಿತನವನ್ನು ಬಣ್ಣಿಸುವುದೇ ಹಾಸ್ಯ ಎಂದುಕೊಂಡಂತಿದೆ. ಇದಕ್ಕೆ ಕಳಶಪ್ರಾಯವಾಗಿ ಇತ್ತೀಚಿನ ಎಪಿಸೋಡಿನಲ್ಲಿ ಸಿಎಸ್‌ಪಿ ತಂಗಿಯನ್ನು ಲಗ್ನ ಪತ್ರಿಕೆ ಕೊಡಲು ಬೆಂಗಳೂರಿಗೆ ಹೋಗಿದ್ದಾಗ ಮೆಟ್ರೋದಲ್ಲಿ ತಿರುಗಾಡಿದೆಯಾ? ಎಂದು ಪ್ರಶ್ನಿಸುತ್ತಾರೆ. ತಂಗಿ ಕೆಲಸವಿಲ್ಲದಿದ್ದರೂ ಮೂರು ಮೂರು ಸಲ ಮೆಟ್ರೋದಲ್ಲಿ ತಿರುಗಾಡಿದೆ ಎಂದು ಕೊಚ್ಚಿಕೊಳ್ಳುತ್ತಾರೆ. ಕಾರಿನಲ್ಲಿ ಹೋದವರು. ಅದರಲ್ಲೂ ಲಗ್ನಪತ್ರಿಕೆ ಕೊಡಲು ಹೋದವರು ಪುರುಸೊತ್ತು ಮಾಡಿಕೊಂಡು ಮೂರು ಸಲ ಮೆಟ್ರೋದಲ್ಲಿ ತಿರುಗಾಡಿದ್ದು ಕೇಳಿ ನಕ್ಕು ನಕ್ಕು ಸಾಕಾಯಿತು.

—ವಾ. ಮುರಳೀಧರ, ತೀರ್ಥಹಳ್ಳಿ

## ಕನ್ನಡಕ್ಕೂ 'ಕನ್ನಡತಿ'ಗೂ ಯಾವ ಸಂಬಂಧ?

ಸುಮಾರು 40 ಕಂತುಗಳನ್ನು ನೋಡಿದ ಮೇಲೂ 'ಕನ್ನಡತಿ' ಧಾರಾವಾಹಿಗೆ ಈ ಹೆಸರು ಏಕೆ ಎನ್ನುವ ವೀಕ್ಷಕರ ಪ್ರಶ್ನೆಗೆ ಉತ್ತರ ದೊರಕುತ್ತಿಲ್ಲ. ನಾಯಕಿ ಕನ್ನಡ ಪ್ರೇಮಿ ಮತ್ತು ಅವಳು ಕನ್ನಡಕ್ಕಾಗಿ ಒಂದೆರಡು ಸಂಘರ್ಷಗಳನ್ನು ಮಾಡಿದ್ದು ಬಿಟ್ಟರೆ, ಈ ಧಾರಾವಾಹಿಗೆ 'ಕನ್ನಡತಿ' ಎಂದು ಹೆಸರು ಇಡುವಷ್ಟು ಕನ್ನಡದ ಸಮಸ್ಯೆಗಳು ಕಾಣುವುದಿಲ್ಲ. ಕನ್ನಡ ನಾಡಿನಲ್ಲಿ ಕನ್ನಡ ಭಾಷೆ ಎದುರಿಸುವ ಸಮಸ್ಯೆಗಳ ಸುತ್ತ ಕಥೆ ಇರಬಹುದು ಎಂದು ಊಹಿಸಿ ವೀಕ್ಷಿಸಿದರೆ ನಿರಾಶೆ ಕಟ್ಟಿಟ್ಟ ಬುತ್ತಿ.

ಇದೊಂದು ಇನ್ನೊಂದು ಹೈ ಪ್ರೊಫೈಲ್ ಕಾರ್ಪೋರೇಟ್ ಕುಟುಂಬದ ಸುತ್ತ ತಿರುಗುವ ಮಾಮೂಲಿ ಧಾರಾವಾಹಿಯಾಗಿದ್ದು, ಮನರಂಜನೆಗೆ ಇರಲಿ ಎಂದು ಸ್ವಲ್ಪ ಹಳ್ಳಿ ಜೀವನದ ಮಸಾಲೆ ಸೇರಿಸಿದ್ದಾರೆ.

—ರಮಾನಂದ ಶರ್ಮಾ, ಬೆಂಗಳೂರು

## ಕಡಿವಾಣ ಬೀಳಲೇಬೇಕು

ನಮ್ಮ ಕನ್ನಡ ಟೀವಿ ಧಾರಾವಾಹಿಗಳ ಬಗ್ಗೆ ಏನು ಹೇಳಿದರೂ ಸಾಲದು. ಅವುಗಳ ನಿರ್ದೇಶಕರು, ಸಂಭಾಷಣೆಕಾರರಿಗೆ ವಿಶೇಷ ಪ್ರಶಸ್ತಿ ಕೊಟ್ಟು ಸನ್ಮಾನ ಮಾಡಬೇಕು ಎಂದೆನಿಸುತ್ತದೆ. ಒಂದಕ್ಕಿಂತ ಒಂದು ಪೈಪೋಟಿಯ ಮೇಲೆ ಕೀಳು ಮಟ್ಟದ ದೃಶ್ಯಗಳನ್ನು ಕಟ್ಟಿಕೊಡುತ್ತಿವೆ. ಈ ಧಾರಾವಾಹಿಗಳಿಗೆ ಸ್ವತಂತ್ರ ಸೆನ್ಸಾರ್ ಮಿತಿ ಬೇಕೆನಿಸುತ್ತದೆ. ಸಂಜೆ ಆರರಿಂದ ರಾತ್ರಿ 9.30ರ ವರೆಗೂ ಬರುವ ಪ್ರತಿ ಧಾರಾವಾಹಿಯೂ ಮೋಸ, ವಂಚನೆ, ಕ್ರೂರತೆಯನ್ನೇ ಬಿಂಬಿಸುತ್ತಿವೆ. ಇಂತಹ ವಿಚಾರ ರಹಿತ ಸಾಹಿತ್ಯಕ್ಕೆ ಕಡಿವಾಣ ಬೀಳಲೇಬೇಕು.

—ಉಷಾ ಎಸ್, ಕೋಡಿಚಿಕ್ಕನಹಳ್ಳಿ

## 'ಥಟ್'ನ ಅಭಾಸ

ಇತ್ತೀಚಿನ ದಿನಗಳಲ್ಲಿ 'ಥಟ್ ಅಂತ ಕೇಳಿ'ಯಲ್ಲಿ, ಕೊರೊನ ಸೋಂಕಿನ ಬಗ್ಗೆ ಸಲಹೆಗಳ ಪಟ್ಟಿ ಕೆಳಗೆ ಬರುವುದು ಸರಿಯೆ. ಆದರೆ ಪ್ರಶ್ನೆಗಳ ಆಯ್ಕೆಗಳ ಕೆಳಗಿನ ಸಾಲುಗಳನ್ನು ಈ ಪಟ್ಟಿ ಕಾಣದಂತಾಗಿಸುವುದರಿಂದ ಪ್ರೇಕ್ಷಕರಿಗೆ ಕಿರಿಕಿರಿ ಉಂಟಾಗುತ್ತದೆ. ಅದರಲ್ಲೂ ಲೆಕ್ಕದ ಪ್ರಶ್ನೆ ಬಂದಾಗ ಕೆಳಗಿನ ಸಾಲು ಕಾಣದೆ ಪ್ರೇಕ್ಷಕರಿಗೆ ಲೆಕ್ಕ ಮಾಡಲು ತೊಂದರೆಯಾಗುವುದು. ಈ ಅಡಚಣೆಯನ್ನು ನಿವಾರಿಸಿದರೆ ಕಾರ್ಯಕ್ರಮ ಹೆಚ್ಚು ಅರ್ಥಪೂರ್ಣವಾಗುವುದು.

—ಡಾ. ನರಸಿಂಹ ಪ್ರಸಾದ್, ಹೊಸಕೋಟೆ